42

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಶಾಂತರಾಮ್ ಬುಡ್ನ ಸಿದ್ದಿ ಇವರು ಬುಡಕಟ್ಟು ಹಾಗೂ ವನವಾಸಿಗಳು ವಾಸಿಸುವ ಪ್ರದೇಶಗಳಲ್ಲಿ ಪಾರಂಪರಿಕ ದೇವಸ್ಥಾನಗಳಿಗೆ, ಮುಜರಾಯಿ ಇಲಾಖೆಯ ಅನುದಾನವನ್ನು ಬಳಸಲು ಇರುವ ನಿಯಮಗಳ ತೊಡಕುಗಳ ಬಗ್ಗೆ ನಿಯಮ 72ರಡಿ ಸಲ್ಲಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಮುಜರಾಯಿ ಹಾಗೂ ಹಜ್ ಮತ್ತು ವಕ್ಫ್ ಸಚಿವರ ಹೇಳಿಕೆ:**

**ಉತ್ತರ:-**

ಕರ್ನಾಟಕ ಹಿಂದೂ ಧಾರ್ಮಿಕ ದತ್ತಿ ಇಲಾಖೆಯಲ್ಲಿ ಒಟ್ಟು 34563 ಅಧಿಸೂಚಿತ ಸಂಸ್ಥೆಗಳಿರುತ್ತದೆ. ಇದರಲ್ಲಿ 205 ಪ್ರವರ್ಗ ಎ, 139 ಪ್ರವರ್ಗ ಬಿ ಮತ್ತು 34219 ಪ್ರವರ್ಗ ಸಿ ಅಧಿಸೂಚಿತ ಸಂಸ್ಥೆಗಳಿರುತ್ತದೆ.

ಕರ್ನಾಟಕ ಹಿಂದೂ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಕಲಂ 19(ಎ)ರಡಿ ಸಾಮಾನ್ಯ ಸಂಗ್ರಹಣಾ ನಿಧಿಯಿಂದ ಮುಜರಾಯಿ ಇಲಾಖೆಯ ಬಡತನದಲ್ಲಿರುವ ಅಥವಾ ಅಗತ್ಯ ಸಂದರ್ಭದಲ್ಲಿರುವ ಇತರೆ ಯಾವುದೇ ಧಾರ್ಮಿಕ ಸಂಸ್ಥೆಗೆ ಸಹಾಯ ನೀಡಲು ಅವಕಾಶವಿದ್ದು, ಇದರನ್ವಯ ದೇವಾಲಯಗಳನ್ನು ಅಭಿವೃದ್ಧಿ ಪಡಿಸಲು ಕರ್ನಾಟಕ ರಾಜ್ಯ ಧಾರ್ಮಿಕ ಪರಿಷತ್‌ನಲ್ಲಿ ಮಂಡಿಸಿ ದೇವಾಲಯಗಳಿಗೆ ಧನಸಹಾಯ ನೀಡಲಾಗುತ್ತಿದೆ.

ಈ ಅನುದಾನದಲ್ಲಿ ಬುಡಕಟ್ಟು ಹಾಗೂ ವನವಾಸಿಗಳು ವಾಸಿಸುವ ಪ್ರದೇಶಗಳಲ್ಲಿ ಪಾರಂಪರಿಕ ದೇವಸ್ಥಾನಗಳಿಗೆ ಧನ ಸಹಾಯ ಕೋರಿ ಪ್ರಸ್ತಾವನೆ ಸ್ವೀಕೃತವಾದಲ್ಲಿ ನಿಯಮಾನುಸಾರ ಪರಿಶೀಲಿಸಿ ಕ್ರಮ ವಹಿಸಲಾಗುವುದು.

- ಅಲ್ಲದೆ, ಧಾರ್ಮಿಕ ದತ್ತಿ ಇಲಾಖೆಯಡಿ ಸರ್ಕಾರವು ಈ ಕೆಳಕಂಡ ಯೋಜನೆಗಳಡಿ ಪ್ರತಿ ಆರ್ಥಿಕ ವರ್ಷ ಅನುದಾನ ಮಂಜೂರು ಮಾಡುತ್ತಿದೆ. ಈ ಅನುದಾನಕ್ಕೆ ಪ್ರತ್ಯೇಕ ಮಾರ್ಗಸೂಚಿಗಳನ್ನು ಹೊರಡಿಸಿದ್ದು, ಸರ್ಕಾರದ ಆದೇಶ ವಿವರ ಈ ಕೆಳಕಂಡಂತಿದೆ.

| ಕ್ರ.ಸಂ | ಯೋಜನೆ | ಸರ್ಕಾರದ ಆದೇಶ ಸಂಖ್ಯೆ ಮತ್ತು ದಿನಾಂಕ |
|---|---|---|
| 1. | ದುರಸ್ತಿ ಜೀರ್ಣೋದ್ಧಾರ/ ಅಭಿವೃದ್ಧಿ/ ನಿರ್ಮಾಣ ಯೋಜನೆ | ಕಂಇ 95 ಮುಅಬಿ 2010 ದಿನಾಂಕ:20.09.2010 |
| 2. | ಆರಾಧನಾ ಯೋಜನೆ | ಕಂಇ 67 ಮುಸರ 2007 ದಿನಾಂಕ:10.10.2008 ಮತ್ತು ಕಂಇ 208 ಮುಅಬಿ 2011 ದಿನಾಂಕ:14.09.2011 |
| 3. | ಪರಿಶಿಷ್ಟಜಾತಿ ಉಪಯೋಜನೆ/ ಗಿರಿಜನ ಉಪಯೋಜನೆ | ಕಂಇ 189 ಮುಅಬಿ 2011 ದಿ:19.09.2011 |

ಮೇಲಿನ ಯೋಜನೆಗಳಡಿ ಮುಜರಾಯಿ ಮತ್ತು ಖಾಸಗಿ ದೇವಾಲಯಗಳು, ಮಠಗಳು, ಇತರೆ ಧಾರ್ಮಿಕ ಸಂಸ್ಥೆ/ ದೇವಾಲಯಗಳಿಗೆ ಸರ್ಕಾರದ ಮಾರ್ಗಸೂಚಿಗಳನ್ವಯ ಸಕ್ಷಮ ಪ್ರಾಧಿಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಅನುದಾನ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಈ ಮೇಲ್ಕಂಡ ಯೋಜನೆಗಳ ಬುಡಕಟ್ಟು ಹಾಗೂ ವನವಾಸಿಗಳು ವಾಸಿಸುವ ಪ್ರದೇಶಗಳಲ್ಲಿ ಪಾರಂಪರಿಕ ದೇವಸ್ಥಾನಗಳಿಗೆ ಮುಜರಾಯಿ ಇಲಾಖೆಯಿಂದ ಅನುದಾನ ಪಡೆಯುವ ಬಗ್ಗೆ ಯಾವುದೇ ತೊಡಕುಗಳು ಇರುವುದು ಕಂಡುಬರುತ್ತಿಲ್ಲ.

. . . 2

ಹಾಗೇಯೇ, ಮುಜರಾಯಿ ಇಲಾಖೆಯ ಗಿರಿಜನ (ಪರಿಶಿಷ್ಟ ಪಂಗಡ) ಉಪಯೋಜನೆಯಡಿ ಪ್ರತಿ ಆರ್ಥಿಕ ವರ್ಷ ಸರ್ಕಾರವು ಒದಗಿಸಿದ ಅನುದಾನವನ್ನು ಗಿರಿಜನ/ಪರಿಶಿಷ್ಟ ಪಂಗಡದವರು ವಾಸಿಸುವ ಸ್ಥಳಗಳಲ್ಲಿ ಅಥವಾ ಸದರಿ ಸಮುದಾಯದವರು ವಾಸಿಸುವ ಸ್ಥಳಕ್ಕೆ ಸಮೀಪ ನಿವೇಶನಗಳನ್ನು ಗುರುತಿಸಿ, ಅಲ್ಲಿ ಅವರಿಗಾಗಿ ದೇವಾಲಯ, ಪ್ರಾರ್ಥನಾ ಮಂದಿರ ಅಥವಾ ಕಲ್ಯಾಣ ಮಂಟಪ/ಸಮುದಾಯ ಭವನವನ್ನು ನಿರ್ಮಿಸಲು ಅಥವಾ ಅವುಗಳ ಜೀರ್ಣೋದ್ಧಾರ ಕಾಮಗಾರಿಗಳಿಗಾಗಿ ಅನುದಾನವನ್ನು ರಾಜ್ಯದ ಎಲ್ಲಾ ವಿಧಾನ ಸಭಾ ಕ್ಷೇತ್ರಗಳಿಗೆ ಸಮಾನವಾಗಿ ಹಂಚಿಕೆ ಮಾಡಿ ಬಿಡುಗಡೆ ಮಾಡಲಾಗುತ್ತಿದೆ. ಸದರಿ ಯೋಜನೆಯಡಿ ಮಂಜೂರಾದ ಅನುದಾನವನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಜಿಲ್ಲಾ ಉಪಯೋಜನಾ ಸಮಿತಿಯಲ್ಲಿ ಪರಿಶೀಲಿಸಿ ಅರ್ಹ ಫಲಾನುಭವಿ ಧಾರ್ಮಿಕ ಸಂಸ್ಥೆಯ ಅಭಿವೃದ್ಧಿ/ ಜೀರ್ಣೋದ್ಧಾರ ಕಾಮಗಾರಿ ನಿರ್ವಹಿಸಲಾಗುತ್ತಿದೆ.

(ಸಂಖ್ಯೆಕಂಇ 170 ಮುಸಪ್ರ 2021)

**(ಶಶಿಕಲಾ.ಅ.ಜೊಲ್ಲೆ)**
ಮುಜರಾಯಿ, ಹಜ್ ಮತ್ತು ವಕ್ಫ್ ಸಚಿವರು